ಕರ್ನಾಟಕ ಸರ್ಕಾರ

# ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ

# ಮರು ಹೊಂದಾಣಿಕೆ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಕೃಇ/166/ಕೃಪಸೇ/2011

ಬೆಂಗಳೂರು, ದಿನಾಂಕ : 12-08-2011.

ಕರ್ನಾಟಕ ಸರ್ಕಾರದ ಸಚಿವಾಲಯ
ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು - 560 001

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಮರು ಹೊಂದಾಣಿಕೆ (Re-deployment) ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ:ಎಹೆಚ್‌ಡಿ 206/ಎಎಂಎಲ್ 94(ವ್ಯಾಲ್ಯೂಂ-3) ದಿನಾಂ:31-12-99.
2) ಸರ್ಕಾರದ ಆದೇಶ ಸಂಖ್ಯೆ: ಸಂಖ್ಯೆ:ಎಹೆಚ್‌ಡಿ 88 ಎಜಿಟಿ 2000 ದಿನಾಂಕ :29-6-2000.
3) ಸರ್ಕಾರದ ಆದೇಶ ಸಂಖ್ಯೆ:ಕೃತೋಇ 225 ಕೃಪಸೇ 2010, ದಿ:15-12-2010.
4) ಸರ್ಕಾರದ ಆದೇಶ ಸಂಖ್ಯೆ: :ಕೃತೋಇ 293 ಕೃಪಸೇ 2010, ದಿ:15-12-2010.

-0-

ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾಗಿರುವ ದಿನಾಂಕ:30-12-1999ರ ಆದೇಶದಲ್ಲಿ ದಿನಾಂಕ:1-1-2000 ರಿಂದ ಜಾರಿಗೆ ಬರುವಂತೆ ಕೃಷಿ ಇಲಾಖೆಯನ್ನು ಪ್ರತ್ಯೇಕಿಸಿ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಹೊಸದಾಗಿ ಸೃಜಿಸಲಾಗಿ ರುತ್ತದೆ. ಹೀಗೆ ಸೃಜನೆಗೊಂಡಂತಹ ಜಲಾನಯನ ಅಭಿವೃದ್ಧಿ ಇಲಾಖೆಗೆ ಮೇಲೆ (2)ರಲ್ಲಿ ಓದಲಾಗಿರುವ ದಿನಾಂಕ : 29-6-2000ರ ಆದೇಶದಲ್ಲಿ ಕೃಷಿ ಇಲಾಖೆಯಲ್ಲಿರುವ ಅಧಿಕಾರಿ/ನೌಕರರುಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಗೆ ಮರು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳಲ್ಲಿರುವ ಅಧಿಕಾರಿ /ನೌಕರರುಗಳಿಂದ ಎರಡೂ ಇಲಾಖೆಗಳ ಸಮನ್ವಯದೊಂದಿಗೆ ಜಲಾನಯನ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗ ಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಂಬಂಧ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸುವ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸಿ, ಈ ಕೆಳಕಂಡ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು ಅಭಿಪ್ರಾಯಪಡಲಾಗಿದೆ.

1) ಪ್ರಸ್ತುತ ಕೃಷಿ ಮತ್ತು ಜಲಾನಯನ ಇಲಾಖೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಕೃಷಿ ಇಲಾಖೆಯಲ್ಲಿನ ಯೋಜನೆಗಳನ್ನು ಸಿಬ್ಬಂದಿಗಳ ತೀವ್ರ ಕೊರತೆಯಿಂದ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿ ರುತ್ತದೆ.

2) ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ವಿವಿಧ ಯೋಜನೆಗಳನ್ನು ಒಗ್ಗೂಡಿಸಿ, ಕೇಂದ್ರ ಸರ್ಕಾರವು ನೂತನ ಸಮಗ್ರ ಜಲಾನಯನ ನಿರ್ವಹಣಾ ಯೋಜನೆಯನ್ನು ರೂಪಿಸಿದೆ. ಕೃಷಿ ಇಲಾಖೆಯಲ್ಲಿ ಯೋಜನೆಗಳ ಸಂಖ್ಯೆ ಹೆಚ್ಚುತ್ತಿವೆ. ಆದರೆ ಹೆಚ್ಚಿನ ಸಿಬ್ಬಂದಿಗಳು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಕೃಷಿ ಇಲಾಖೆಯು ತೀವ್ರತರವಾದ ಸಿಬ್ಬಂದಿಯ ಕೊರತೆಯನ್ನು ಅನುಭವಿಸುತ್ತಿದೆ.

3) ಎರಡು ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದ ಕೃಷಿಯಲ್ಲಿ ಸಮಗ್ರವಾದ ಬೆಳವಣಿಗೆ ಕುಂಠಿತವಾಗಿರುತ್ತದೆ.

ಮೇಲಿನ ಸಮಸ್ಯೆಗಳನ್ನು ಚರ್ಚಿಸಿದ ನಂತರ ಎರಡೂ ಇಲಾಖೆಗಳ ಸಿಬ್ಬಂದಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪುನರ್ ಸಂಘಟಿಸಿ ಕೆಲಸ ಹಂಚುವುದರಿಂದ ಈ ಕೆಳಕಂಡ ಅನುಕೂಲಗಳಾಗುತ್ತವೆಂಬುದನ್ನು ಸಹ ಸಭೆಯು ಗಮನಿಸಿರುತ್ತದೆ.

ಕೃಷಿ ಇಲಾಖೆಯಲ್ಲಿ ಮಳೆಗಾಲದ ಆರಂಭದಲ್ಲಿ ಕೆಲಸವಿದ್ದು, ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಮಳೆಗಾಲದ ನಂತರ ಕೆಲಸಗಳು ಪ್ರಾರಂಭಗೊಳ್ಳುತ್ತವೆ. ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸಿದಲ್ಲಿ ಇರುವಂತಹ ಸಿಬ್ಬಂದಿಗಳ ಮಾನವ ಸಂಪನ್ಮೂಲವನ್ನು ವರ್ಷಪೂರ್ತಿ ಬಳಸಿಕೊಂಡು, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಯೋಜನೆಗಳ ಸಮಗ್ರ ಅನುಷ್ಠಾನಕ್ಕೆ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ, ಮತ್ತು ಇಲಾಖೆಗಳ ಕಾರ್ಯಕ್ರಮಗಳನ್ನು ಸಮ್ಮಿಲನಗೊಳಿಸಿ (Convergence), ಸಮನ್ವಯತೆ ಸಾಧಿಸಿ, ರೈತರ ಸಮಗ್ರ ಅಭಿವೃದ್ಧಿಗೆ ಅನುವು ಮಾಡಬಹುದಾಗಿದೆ.

ಮೇಲ್ಕಂಡ ಅಂಶಗಳ ಸಾಧಕ ಬಾಧಕಗಳ ಬಗ್ಗೆ ದಿನಾಂಕ:1-7-2011ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರುಗಳೊಂದಿಗೆ ಚರ್ಚಿಸಲಾಗಿದ್ದು, ಚರ್ಚೆಯಲ್ಲಿ ಎತ್ತಿದ ಅಂಶಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.

1) ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಅದೇ ವ್ಯವಸ್ಥೆಯಲ್ಲಿಯೇ ಮುಂದುವರೆಯುತ್ತವೆ.

2) ಜಲಾನಯನ ಅಭಿವೃದ್ಧಿ ಇಲಾಖೆಯ ಸ್ಟ್ರಕ್ಚರ್ ಕಾರ್ಯನಿರ್ವಹಣೆಯ ಬಗ್ಗೆ ಯಾವುದೇ ಸಮಿತಿಯ ಮೌಲ್ಯಮಾಪನ ವರದಿಯಿರುವುದಿಲ್ಲ.

3) ಪ್ರಸ್ತುತ ವಿಶ್ವಬ್ಯಾಂಕಿನ ಯೋಜನೆಗಳು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಇಲ್ಲದೇ ಇರುವುದರಿಂದ ವಿಶ್ವಬ್ಯಾಂಕ್ ಈ ಹಿಂದೆ ಜಲಾನಯನ ಅಭಿವೃದ್ಧಿ ಇಲಾಖೆಯು ಪ್ರತ್ಯೇಕವಾಗಿರಬೇಕೆಂದು ವಿಧಿಸಿದ್ದ ನಿಬಂಧನೆಗಳು ಸಹ ಇರುವುದಿಲ್ಲ.

4) ಜಲಾನಯನ ಅಭಿವೃದ್ಧಿ ಇಲಾಖೆಗೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಪ್ರತ್ಯೇಕ ಹುದ್ದೆಗಳಿರುವುದಿಲ್ಲ. ಎಲ್ಲಾ ಹುದ್ದೆ ಗಳನ್ನು ಕೃಷಿ, ತೋಟಗಾರಿಕೆ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳಿಂದ ನಿಯೋಜಿಸಲ್ಪಟ್ಟ ಹುದ್ದೆಗಳಾಗಿರುತ್ತವೆ.

ಈ ಪುನರ್ ಸಂಘಟನೆಯಿಂದ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿನ 37 ಉಪ ವಿಭಾಗಗಳನ್ನು ರದ್ದುಪಡಿಸಿ, ಸದರಿ ಕಛೇರಿಗಳ ಸಿಬ್ಬಂದಿಯನ್ನು ಕೃಷಿ ಇಲಾಖಾ ಕಛೇರಿಗಳಿಗೆ ಮರು ಹಂಚಿಕೆ ಮಾಡಲಾಗುವುದು, ಹಾಗು ಯಾವುದೇ ಹೊಸ ಹುದ್ದೆಯು ಸೃಜನೆ ಯಾಗುವುದಿಲ್ಲ ಮತ್ತು ಈ ಮರು ಹೊಂದಾಣಿಕೆಯಿಂದ ವರ್ಗಾವಣೆ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ.

ಮೇಲ್ಕಂಡ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಮೇಲೆ ಕ್ರಮಾಂಕ (1) ಮತ್ತು (2)ರಲ್ಲಿ ಓದಲಾಗಿ-ರುವ ಆದೇಶಗಳನ್ನು ಬಾಗಶ: ಮಾರ್ಪಡಿಸಿ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಗಳ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸಲು (Re-organize) ಮತ್ತು ಈ ಸಂಬಂಧ ಉಂಟಾಗಲಿರುವ ವರ್ಗಾವಣೆಗಳನ್ನು ಜಾರಿಗೊಳಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಅದೇಶ ಸಂಖ್ಯೆ:ಕೃಇ 166 ಕೃಪಸೇ 2011**
**ಬೆಂಗಳೂರು, ದಿನಾಂಕ: 12-08-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಹೆಚ್‌ಡಿ 206 ಎಎಂಎಲ್ 94 (ವ್ಯಾಲ್ಯೂಂ-III) ದಿನಾಂಕ: 31-12-1999 ಹಾಗೂ ಎಹೆಚ್‌ಡಿ 88 ಎಜಿಟಿ 2000 ದಿನಾಂಕ:29-6-2000ಗಳನ್ನು ಭಾಗಶ: ಮಾರ್ಪಡಿಸಿ ಮತ್ತು ಕೃತೋಇ 225 ಕೃಪಸೇ 2010 ದಿನಾಂಕ:15-12-2010 ಹಾಗೂ ಕೃತೋಇ 293 ಕೃಪಸೇ 2010 ದಿನಾಂಕ:15-12-2010ಗಳನ್ನು ರದ್ದುಪಡಿಸಿ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಎರಡೂ ಇಲಾಖೆಗಳನ್ನು ಅನುಬಂಧಗಳಲ್ಲಿ ಕಾಣಿಸಿರುವಂತೆ ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಪುನರ್ ಸಂಘಟನೆ (Re-organize) ಮಾಡಿ ಆದೇಶಿಸಿದೆ.

1) ತಾಲ್ಲೂಕು ಮಟ್ಟದಲ್ಲಿದ್ದ ಕೃಷಿ ಅಧಿಕಾರಿ ವೃಂದದ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಹಾಗೂ ಉಪ ವಿಭಾಗ ಮಟ್ಟದಲ್ಲಿದ್ದ ಸಹಾಯಕ ಕೃಷಿ ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖಾ ಕಚೇರಿಗಳನ್ನು ರದ್ದುಪಡಿಸಲಾಗಿದೆ.

2) ಈ ಪುನರ್ ಸಂಘಟನೆಯಿಂದ ಯಾವುದೇ ಹೊಸ ಹುದ್ದೆಗಳು ಸೃಜನೆ-ಯಾಗುವುದಿಲ್ಲ. ಹಾಲಿಯಿರುವ ಹುದ್ದೆಗಳು ಹಾಗೂ ಲೆಕ್ಕ ಶೀರ್ಷಿಕೆಗಳೇ ಮುಂದುವರೆಯುತ್ತವೆ.

3) ತಾಲ್ಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಕೃಷಿ ಕಾರ್ಯಕ್ರಮ ಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಜಿಲ್ಲಾ ಮಟ್ಟದ ಉಪ ಕೃಷಿ ನಿರ್ದೇಶಕರು (ಕೃಷಿ) ಇವರಿಗೆ ಹಾಗೂ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ/ಉಪ ಕೃಷಿ ನಿರ್ದೇಶಕರು (ಜಲಾನಯನ) ಇವರಿಗೆ ಮೇಲು ಸಹಿಗೆ ಮಂಡಿಸುವುದು.

4) ಜಿಲ್ಲಾ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರು ಕೃಷಿ ಇಲಾಖಾ ಕಾರ್ಯಕ್ರಮಗಳಿಗೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖಾ ಕಾರ್ಯಕ್ರಮಗಳಿಗೆ ಜಿಲ್ಲಾ ಮಟ್ಟದ ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ, ಹಾಗೂ ಸಂಬಂಧಿಸಿದ ಇಲಾಖಾ ಕಾರ್ಯಕ್ರಮಗಳ ಬಿಲ್ಲುಗಳಿಗೆ ಮೇಲು ರುಜು ಮಾಡುವ ಅಧಿಕಾರ ಹೊಂದಿರುತ್ತಾರೆ.

5) ಜಿಲ್ಲಾ ಮಟ್ಟದಲ್ಲಿರುವ ಉಪ ಕೃಷಿ ನಿರ್ದೇಶಕರು ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು (ಉಪ ಕೃಷಿ ನಿರ್ದೇಶಕರ ವೃಂದ) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಆಡಳಿತ ವ್ಯಾಪ್ತಿಗೆ ಒಳಪಡುತ್ತಾರೆ.

6) ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ರಾಜ್ಯ ಕೀಡೆನಾಶಕ ಪರೀಕ್ಷಾ ಪ್ರಯೋಗಾಲಯ, ಮಣ್ಣು ಪರೀಕ್ಷಾ ಪ್ರಯೋಗಾಲಯ, ಪರತಂತ್ರ ಜೀವಿ ಪ್ರಯೋಗಾಲಯ, ಜೈವಿಕ ಗೊಬ್ಬರಗಳ ಪ್ರಯೋಗಾಲಯ (ರೈಜೋಬಿಯಂ) ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಿಗೆ ಸಹಾಯಕ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ನೇರವಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯವ್ಯಾಪ್ತಿಯಡಿ ಕಾರ್ಯನಿರ್ವಹಿಸುವುದು.

7) Plant Quarantine Laboratory (ಸಸ್ಯರೋಗ ಶಾಸ್ತ್ರ) ಪ್ರಯೋಗಾಲಯಕ್ಕೆ ಉಪ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ.

8) ಕೃಷಿ ಆಯುಕ್ತರ ಆವರಣದಲ್ಲಿ ಬರುವ ಎಲ್ಲಾ ಸ್ವತಂತ್ರ ಬಟವಾಡೆ ಅಧಿಕಾರಿ ಗಳನ್ನು ಒಂದುಗೂಡಿಸಿ, ಕೃಷಿ ನಿರ್ದೇಶಕರ ಸಿಬ್ಬಂದಿಯಲ್ಲಿ ವಿಲೀನಗೊಳಿಸ ಲಾಗಿದೆ. ಇನ್ನು ಮುಂದೆ ಕೃಷಿ ಆಯುಕ್ತರ ಕಾರ್ಯಾಲಯದ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದ ವೇತನ ಮತ್ತು ಇತರೆ ಭತ್ಯೆಗಳನ್ನು ತೆಗೆಯುವ ಮತ್ತು ವಿತರಿಸುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

9) ತಾಲ್ಲೂಕು, ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿವಿಧ ಹಂತದ ಅಧಿಕಾರಿಗಳು ಅನುಬಂಧ-4ರಲ್ಲಿ ವಿವರಿಸಿರುವಂತೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

10) ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ (ಕೃಷಿ ವಿಭಾಗ)ದಲ್ಲಿ ಲಭ್ಯವಿರುವ ಯೋಜನೆ/ಯೋಜನೇತರ, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ ರಾಜ್ಯ ವಲಯ/ ಕೇಂದ್ರ ವಲಯದಲ್ಲಿ ಬರುವ ಎಲ್ಲಾ ವಿವಿಧ ವೃಂದಗಳ ಖಾಯಂ ಮತ್ತು ತಾತ್ಕಾಲಿಕ ಹುದ್ದೆಗಳನ್ನು ಈ ಆದೇಶದಲ್ಲಿರುವ (ಅನುಬಂಧ-1 ರಿಂದ 3ರವರೆಗೆ) ವಿವಿಧ ಕಛೇರಿಗಳಿಗೆ ಮರು ವಿನ್ಯಾಸಗೊಳಿಸಿ, ಹುದ್ದೆಗಳನ್ನು ಮರು ಹಂಚಿಕೆ ಮಾಡುವ ಅಧಿಕಾರವನ್ನು ಕೃಷಿ ಆಯುಕ್ತರಿಗೆ ನೀಡಲಾಗಿದೆ.

11) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಎಲ್ಲಾ ವೇತನ ಬಟವಾಡೆ ಮಾಡುವ ಅಧಿಕಾರಿಗಳಿಗೆ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಹಾಲಿಯಿರುವ ಮುಖ್ಯ ಲೆಕ್ಕಶೀರ್ಷಿಕೆಗಳಾದ 2401 ಮತ್ತು 2402 ರಲ್ಲಿನ ಎಲ್ಲಾ ಉಪ ಲೆಕ್ಕ ಶೀರ್ಷಿಕೆಗಳು ಹಾಗೂ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಲೆಕ್ಕ ಶೀರ್ಷಿಕೆಗಳಾದ 2435-00-101-0-27 (ಯೋಜನೇತರ) ಮತ್ತು 2435-00-101-0-61 (ಯೋಜನೇತರ) ಗಳನ್ನು ನಿರ್ವಹಿಸಲು ಆರ್ಥಿಕ ಅಧಿಕಾರವನ್ನು ನೀಡಲಾಗಿದೆ.

12) ಸರ್ಕಾರದ ಆದೇಶ ಸಂಖ್ಯೆ:ಎಹೆಚ್‌ಡಿ 130 ಕೃಪವ 99 ದಿನಾಂಕ:30-5-2000ರಂತೆ ಶೇ.5ರಡಿಯಲ್ಲಿ ರದ್ದಾದ ಹುದ್ದೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಅವರ ವಯೋನಿವೃತ್ತಿ/ಬಡ್ತಿ/ಇತರೆ ಕಾರಣಗಳಿಂದಾಗಿ ಹುದ್ದೆ ಖಾಲಿಯಾಗುವವರೆಗೆ ಮುಂದುವರೆಸಲಾಗಿದೆ.

ಈ ಸಂಬಂಧ ಉಂಟಾಗಲಿರುವ ಹುದ್ದೆಗಳ ಮರು ಹಂಚಿಕೆಯ ರಚನೆ (structure) ಹಾಗೂ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅನುಬಂಧ-4ರಲ್ಲಿ ನೀಡಲಾಗಿದೆ.

ಈ ಆದೇಶದ ಪರಿಣಾಮವಾಗಿ ಉಂಟಾಗುವ ವರ್ಗಾವಣೆ ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
Manjunath 12/08/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ

ಇವರಿಗೆ:-

ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು ಇವರಿಗೆ- ಮುಂದಿನ ವಾರದ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ,ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5) ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6) ಎಲ್ಲಾ ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳಿಗೆ,
7) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ
8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ
9) ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ,
10) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್,
11) ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಧಾರವಾಡ ಮತ್ತು ರಾಯಚೂರು.
12) ಎಲ್ಲಾ ಜಿಲ್ಲಾಧಿಕಾರಿಗಳಿಗೆ
13) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
14) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
15) ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ
16) ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳಿಗೆ
17) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18) ಸರ್ಕಾರದ ಅಧೀನ ಕಾರ್ಯದರ್ಶಿಗಳು (ಕೃಷಿ) ಮತ್ತು (ಯೋಜನೆ)

ಪ್ರತಿಯನ್ನು ವಂದನಾಪೂರ್ವಕವಾಗಿ:-

1) ಮಹಾಲೇಖಪಾಲರು, ಕರ್ನಾಟಕ I ಮತ್ತು II ಬೆಂಗಳೂರು.
2) ಕಾರ್ಯದರ್ಶಿಗಳು, ಕೃಷಿ ಮತ್ತು ಸಹಕಾರ, ಭಾರತ ಸರ್ಕಾರ, ಕೃಷಿ ಮತ್ತು ಸಹಕಾರ ಮಂತ್ರಾಲಯ, ಕೃಷಿ ಭವನ, ನವದೆಹಲಿ-110001.

| ANNEXURE-1 | | | |
|---|---|---|---|
| **DETAILS OF POSTS IN THE DIFFERENT OFFICES AND STAFFING PATTERN** | | | |
| Sl. No. | Name of the Office | No.of Offices | No.of Posts |
| 1 | Department of Agriculture, Head Office, Bangalore | 1 | 469 |
| 2 | Commissioner, Watershed Department, Bangalore | 1 | 81 |
| 3 | Plant Quarantine Lab, Bangalore | 1 | 7 |
| 4 | Joint Director of Agriculture | 30 | 450 |
| 5 | Deputy Director of Agriculture | 30 | 700 |
| 6 | District Watershed Development Officer | 29 | 475 |
| 7 | Assistant Director of Agriculture (Taluka) | 176 | 2594 |
| 8 | DISTRICT AGRICULTURE TRAINING INSTITUTE | 23 | 398 |
| 9 | WATERSHED TRAINING INSTITUTE | 2 | 32 |
| 10 | STATE PESTICIDE TESTING LABORATORY | 6 | 96 |
| 11 | FERTILIZER CONTROL LABORATORY | 7 | 112 |
| 12 | SEED TESTING LABORATORY | 4 | 60 |
| 13 | BIOCONTROL (PARASITIC) LABORATORY | 6 | 72 |
| 14 | BIOFERTILIZER (RHIZOBIUM) LABORATORY | 3 | 36 |
| 15 | PESTICIDE RESIDUE LABORATORY | 1 | 12 |
| 16 | STATE SOIL SURVEY LABORATORY | 2 | 36 |
| 17 | SOIL HEALTH LABORATORY | 28 | 364 |
| 18 | RAITHA SAMPARKA KENDRA (HOBLI) | 747 | 5841 |
| 19 | Agricultural Officer (Agricultural Farms) | 52 | 156 |
| | TOTAL | **1149** | **11991** |

Manjunath Patil 12/08/11

**Manjunath Patil,**
Under Secretary to Government,
Agriculture Department.

## ANNEXURE- II

### DETAILS OF POSTS IN THE HEAD OFFICE (AGRICULTURE )

| Sl. No. | Category of Posts | Cadre Strength |
|---|---|---|
| A | SECRETARIAT WING | |
| 1 | Additional Director of Agriculture | 1 |
| 2 | Joint Director of Agriculture | 1 |
| 3 | Assistant Director of Agriculture | 3 |
| 4 | Agriculture Officer | 3 |
| 5 | Stenographer | 2 |
| 6 | Sr. Typist / Typist | 1 |
| 7 | Sr. Driver / Driver | 2 |
| 8 | Group - D | 4 |
| | TOTAL | **17** |
| | | |
| B | AGRICULTURE WING | |
| 1 | Commissioner | 1 |
| 2 | Director of Agriculture | 1 |
| 3 | Additional Director (Administration) | 1 |
| 4 | Additional Director of Agriculture | 4 |
| 5 | Joint Director of Agriculture | 6 |
| 6 | Deputy Director of Agriculture | 14 |
| 7 | Chief Accounts Officer | 1 |
| 8 | Law Officer | 1 |
| 9 | Executive Engineer | 1 |
| 10 | Assistant Director of Agriculture | 10 |
| 11 | Deputy Director of Statistics (FM) | 1 |

| | | |
|---|---|---|
| 12 | Administrative Officer | 2 |
| 13 | Assistant Executive Engineer | 2 |
| 14 | Senior Programmer (computer) | 1 |
| 15 | Agriculture Officer | 59 |
| 16 | Assistant Statistician | 1 |
| 17 | Chief Artist -cum - Audio Visual specialist | 1 |
| 18 | Administrative Assistant | 10 |
| 19 | Assistant Engineer (Civil) | 2 |
| 20 | Superintendent | 20 |
| 21 | Librarian | 1 |
| 22 | Assistant Statistical Officer | 3 |
| 23 | Sr. Offset Printer | 1 |
| 24 | Statistical Inspector | 2 |
| 25 | First Division Assistant | 60 |
| 26 | Library Assistant | 1 |
| 27 | Stenographer | 15 |
| 28 | Sr. Computarist | 6 |
| 29 | Sr. Typist / Typist | 10 |
| 30 | Sr. Driver / Driver | 29 |
| 31 | Second Division Assistant | 35 |
| 32 | Printer | 1 |
| 33 | Binder | 1 |
| 34 | Attender | 10 |
| 35 | Group - D | 102 |
| | TOTAL | 416 |